## ಆನಂದ ಝುಂಜರವಾಡ

ಕಲೆ: ಗುರು ನಾವಳ್ಳಿ

**ಅನುವಾದಕಿ ಸರಸ್ವತಿ ಗಜಾನನ ರಿಸಬೂಡ (31.12.1931–25.08.2021) ಇತ್ತೀಚೆಗೆ ನಿಧನರಾದರು. ಅವರು ಮರಾಠಿಯಿಂದ ಕನ್ನಡಕ್ಕೆ ಮಾಡಿದ ಅನುವಾದಗಳ ಮಹತ್ತ್ವದ ಕುರಿತ ಅವಲೋಕನ ಇಲ್ಲಿದೆ.**

ಕನ್ನಡ ಚಿಂತನೆಗೆ ಮೌಲಿಕ ಮರಾಠಿ ಕೃತಿಗಳ ಅನುವಾದವನ್ನು ಸೇರಿಸುವ ಮೂಲಕ ಒಂದು ಬಗೆಯ ಸಾರಸ್ವತ ಪೌಷ್ಟಿಕತೆಯನ್ನು ಒದಗಿಸುವ ಕೆಲಸ ಮಾಡಿದ ಸರಸ್ವತಿ ಗಜಾನನ ರಿಸಬೂಡ ಇತ್ತೀಚೆಗೆ ನಮ್ಮನ್ನು ಅಗಲಿದರು. 90 ವರ್ಷದ ದೀರ್ಘ ಬದುಕು ಬಾಳಿದ ಸರಸ್ವತಿಯವರು ಮರಾಠಿ ವೈಚಾರಿಕ ಪರಂಪರೆಯ ರಕ್ತ ಸಂಬಂಧಿಯಾಗಿ ಬೆಳೆದು, ಮಹಾರಾಷ್ಟ್ರದ ಬೌದ್ಧಿಕ ಆಯಾಮಗಳ ಪರಂಪರೆಗೂ ಅಸಲಿ ವಾರಸುದಾರರೇ ಆಗಿದ್ದರು.

31–12–1931ರಂದು ಸಾಂಗ್ಲಿಯಲ್ಲಿ ಹುಟ್ಟಿದ ಸರಸ್ವತಿಯವರ ತವರು ಮನೆಯ ಹೆಸರು ಯಮುನಾ ದತ್ತಾತ್ರೇಯ ದಿವೇಕರ ಎಂದಾಗಿತ್ತು. ಎಸ್ಸೆಸ್ಸೆಲ್ಸಿವರೆಗೆ ಶಾಲೆಯ ಶಿಕ್ಷಣವನ್ನು ಮರಾಠಿ ಮಾಧ್ಯಮದಲ್ಲಿ ಮುಗಿಸಿದ ಸರಸ್ವತಿ ಅವರು 05–12–1949ರಂದು ಗಜಾನನ ರಿಸಬೂಡರೊಂದಿಗೆ ಮದುವೆಯಾದರು. ಕೃಷಿ ಇಲಾಖೆಯಲ್ಲಿ ಎಂಜಿನಿಯರ್ ಆಗಿದ್ದ ಗಜಾನನ ಅವರಿಗೆ 1959ರಲ್ಲಿ ಬೆಂಗಳೂರಿಗೆ ವರ್ಗಾವಣೆ ಆಯಿತು. ಹೀಗಾಗಿ, ಕನ್ನಡ ಭಾಷೆಯ ಜೊತೆಗಿನ ಒಡನಾಟ ಸರಸ್ವತಿಯವರಿಗೆ ಅನಿವಾರ್ಯವಾಯಿತು. ತಾವು ಸ್ವತಃ ಕನ್ನಡ ಭಾಷೆಯನ್ನು ಕಲಿಯುವುದರ ಜೊತೆಗೆ ಮಕ್ಕಳಿಗೂ ಕನ್ನಡದ ತಿಳಿವನ್ನು ನೀಡಿದರು.

ಈ ಎಲ್ಲ ಬದಲಾವಣೆಗಳಿಂದ ಆದ ಒಂದು ಮುಖ್ಯ ಸಂಗತಿ ಎಂದರೆ, ಸರಸ್ವತಿಯವರು ತಮ್ಮ ಮೂಲದ ಮರಾಠಿ ಸಂಸ್ಕೃತಿ, ಸಾಹಿತ್ಯ ಎರಡರ ಜೊತೆಗೂ ಒಂದು ಆರೋಗ್ಯಪೂರ್ಣ ಅಂತರ ಕಾಯ್ದುಕೊಳ್ಳುವ ಮೂಲಕವೇ ಎರಡೂ ನೆಲದ ವೈಚಾರಿಕತೆಗಳನ್ನು ಒಂದು ಇಡೀ ನಾಗರಿಕ ಸಮೂಹದ ಸಂಕಟಗಳು ಎನ್ನುವಂತೆ ಅರಗಿಸಿಕೊಳ್ಳುವುದು ಅವರಿಗೆ ಸಹಜವಾಗಿ ಸಾಧ್ಯವಾಯಿತು. ನಾವು ಕೀಲಿಸಿಕೊಂಡ ವೈಚಾರಿಕ ಜಗತ್ತಿನ ನಡುವೆಯೇ ಅವಿಭಕ್ತವಾಗಿ ಬದುಕಬೇಕಾದ ಚಿಂತನೆಗಳಿಗೆ, ಒಂದು ವಸ್ತುವನ್ನು ಕಾಣಲು ಬೇಕಾಗುವ ಸೂಕ್ತ ಅಂತರವನ್ನು ಕಣ್ಣು ಮತ್ತು ವಿಷಯಗಳ ನಡುವೆ ಏರ್ಪಡಿಸಿಕೊಳ್ಳುವುದು ಕಷ್ಟವಾಗಿಬಿಡಬಹುದು. ತನ್ನದೇ ನೆಲದ ತನ್ನೆದುರಿನ ಭಾಷಿಕ ವೈವಿಧ್ಯಗಳು ಗಡುಚಿಕ್ಕಿ, ಅನ್ಯ ಸಾಧ್ಯತೆಯ ಧ್ವನಿಗಳನ್ನು ನಾವು ಕೇಳುವುದರೊಂದಿಗೆ, ನಮ್ಮ ಪಕ್ಕದಲ್ಲೇ ನಮ್ಮಂತೆಯೇ ಆಲೋಚಿಸುವ ಸಂದಣಿಗಳು ಇಡಿಕಿರಿದು ತುಂಬಿ ಬಿಟ್ಟರಂತೂ, ಧ್ಯಾನಗಳಿಗೆ ನಿಧಾನವು ಒದಗುವದೇ ಕಷ್ಟ.

ಸರಸ್ವತಿಯವರ ಸ್ವತಂತ್ರ ಆಲೋಚನೆಗಳನ್ನು ಸ್ವಾಯತ್ತವಾಗಿ ಬಿಂಬಿಸುವ ಸ್ವಂತದ ಬರಹಗಳು